# ಶರಣ ಸಂಗಮ

ಚಿತ್ರದುರ್ಗ ಜ. 5 : ಮಾನವ ಇಂದು ಹಣದ ಆಸೆಗೆ ಒಳಗಾಗಿ ಜೀವನದಲ್ಲಿ ನೆಮ್ಮದಿ, ಅದರೊಟ್ಟಿಗೆ ವೃತ್ತಿಧರ್ಮವನ್ನು ಕಳೆದುಕೊಳ್ಳುತ್ತಿದ್ದಾನೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್.ಜೆ.ಎಂ. ದಂತ ಮಹಾವಿದ್ಯಾಲಯ ಹಾಗು ಆಸ್ಪತ್ರೆ ಚಿತ್ರದುರ್ಗ ಇವರ ಸಹಯೋಗದಲ್ಲಿ ನಡೆದ ಶರಣ ಸಂಗಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ದೈನಂದಿನ ಜೀವನದಲ್ಲಿ ತತ್ವಾಚರಣೆ ಆಗುವುದೆ? ವಿಷಯ ಕುರಿತು ಮಾತನಾಡಿದ ಶ್ರೀಗಳು, ಮಾನವ ಧರ್ಮವೆ ಜೀವನ ಧರ್ಮ. ಜೀವನದ ಜೊತೆಯಲ್ಲಿ ಧರ್ಮ ಇದೆ. ಮನೋಧರ್ಮದ ಜೊತೆಯಲ್ಲಿ ಸಾಗುತ್ತ ಮತ್ತೊಂದು ಧರ್ಮ ಜೊತೆಯಾಗುತ್ತಾ ಹೋಗುತ್ತದೆ ಅದುವೇ ವೃತ್ತಿಧರ್ಮ. ವೃತ್ತಿ ಧರ್ಮ ಮತ್ತು ಜೀವನ ಧರ್ಮದಾಚೆಗೆ ಮತ ಧರ್ಮ ಇದೆ. ತತ್ವ ನಮ್ಮಲ್ಲಿ ಕಳೆದುಹೋಗಬಾರದು. ತತ್ವಾದರ್ಶಗಳನ್ನು ಆಚರಣೆ ಮಾಡುವಾಗ ಮಾನವನಿಗೆ ಕೆಲವೊಮ್ಮೆ ಜಾಣ ಮರೆವು ಬರುತ್ತದೆ ಎಂದು ನುಡಿದರು.

ನಂತರ ಶ್ರೀಗಳು ಶಶಿಧರ ಉಬ್ಬಳಗುಂಡಿ ರಚಿಸಿರುವ ಹೃನ್ಮಂದಿರ ಕೃತಿಯನ್ನು ಬಿಡುಗಡೆಗೊಳಿಸಿದರು.

ದಾವಣಗೆರೆಯ ಲೇಖಕ ಎನ್.ಜೆ. ಶಿವಕುಮಾರ್ ಮಾತನಾಡಿ, ಸತ್ಸಂಗ ಮಾಡಿದರೆ ತಪ್ಪುಗಳು ಕಡಿಮೆಯಾಗುತ್ತವೆ. ಆಗ ಮಾತ್ರ ಸಾರ್ಥಕ ಬದುಕು ಬಾಳಲು ಸಹಾಯಕವಾಗುತ್ತದೆ. ನಮ್ಮ ಜೀವನದಲ್ಲಿ ದೈನಂದಿನ ತತ್ವಾಚರಣೆ ಆಗಬೇಕು ಅಂದಾಗ ಮಾತ್ರ ಪರಿವರ್ತನೆ ಸಾಧ್ಯ. ಹೆಣ್ಣಿಗೆ ಮೊದಲು ಗೌರವವನ್ನು ಕೊಡಬೇಕು. ವ್ಯಕ್ತಿಯಲ್ಲಿ ಶರಣರ ಜೀವನ ಮೌಲ್ಯಗಳು ಮಾನವೀಯತೆ ಜೀವಪರ ಕಾಳಜಿಗಳು ಇದ್ದರೆ ಉತ್ತಮ ಬದುಕಿನ ಸಾಧ್ಯತೆ ಇದೆ. ಕಸ ಗುಡಿಸುವ ಸತ್ಯಕ್ಕನಿಗೆ ಎಷ್ಟು ಪ್ರಾಮುಖ್ಯವೊ ಅಧ್ಯಕ್ಷರಾದ ಅಲ್ಲಮಪ್ರಭುವಿಗೂ ಕೂಡ ಒಂದೇ ಮನ್ನಣೆ. ಯಾರೂ ಮೇಲಲ್ಲ, ಕೀಳಲ್ಲ ಎಂಬ ಭಾವನೆ ಶರಣರದು. ಬಸವಣ್ಣನವರು ಎಲ್ಲರಿಗೂ ಪ್ರೇರಕರಾದರು. ಕಾಯಕ ಮತ್ತು ಮಾನವೀಯತೆ ಇದೆ ಎಂದು ಅವರು ಬೌದ್ಧಿಕ ಶ್ರೀಮಂತರು. ಕಾಲಕ್ಕೆ ಮಹತ್ವವನ್ನು ಕೊಡವವರು ಯಾವತ್ತೂ ಬದುಕಿನ ಉದ್ಧಾರದ ಬಗ್ಗೆ ಶ್ರಮಿಸುತ್ತಾರೆ ಎಂದು ಹೇಳಿದರು.

ಲೇಖಕ ಶಶಿಧರ ಉಬ್ಬಳಗುಂಡಿ ಮಾತನಾಡಿ, ಮಾನವ ಜನ್ಮ ಸಾರ್ಥಕ್ಯವನ್ನು ಪಡೆಯಬೇಕಾದರೆ ಉತ್ತಮ ಚಿಂತನೆಗಳು ನಮ್ಮೊಳಗಿರಬೇಕು. ಉತ್ತಮ ಸಂಸ್ಕಾರ, ಸಂಸ್ಕøತಿ ನಮ್ಮದಾಗಬೇಕೆಂದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಡಾ. ಆರ್. ಗೌರಮ್ಮ ಸ್ವಾಗತಿಸಿದರು. ಶ್ರೀಮತಿ ಅನ್ನಪೂರ್ಣ ಲಿಂಗರಾಜು ನಿರೂಪಿಸಿದರು.


ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಎಸ್.ಜೆ.ಎಂ. ದಂತ ಮಹಾವಿದ್ಯಾಲಯ
ಶರಣ ಸಂಗಮ ಮತ್ತು
ಹೃನ್ಮಂದಿರ ಕೃತಿ ಬಿಡುಗಡೆ
ಚಿಂತನ ವಿಷಯ : ದೈನಂದಿನ ಜೀವನದಲ್ಲಿ ತತ್ತ್ವಾಚರಣೆ ಆಗುವುದೆ?
ದಿನಾಂಕ : 05-01-2022 ಬುಧವಾರ
ಸ್ಥಳ : ಅನುಭವ ಮಂಟಪ


ಶರಣ ಸಂಗಮ ಮತ್ತು
ಹೃನ್ಮಂದಿರ ಕೃತಿ ಬಿಡುಗಡೆ


ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಎಸ್.ಜೆ.ಎಂ. ದಂತ ಮಹಾವಿದ್ಯಾಲಯ
ಶರಣ ಸಂಗಮ ಮತ್ತು